ಸಾರ್ವಜನಿಕ ಶಿಕ್ಷಣ ಇಲಾಖೆ

Department of Public Instruction

# ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು

ಕ.ಪ್ರೌ.ಶಿ.ಪ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು–560003.

# Karnataka School Quality Assessment and Accreditation Council

K.S.E.E.B, Malleshwaram, Bengaluru–560003.

## 7ನೇ ತರಗತಿಯ ಸಾಮಾನ್ಯ ಮೌಲ್ಯಾಂಕನ – 2020 – ಮಾದರಿ ಪ್ರಶ್ನೆಪತ್ರಿಕೆ

## 7th STANDARD GENERAL ASSESSMENT - 2020 - MODEL QUESTION PAPER

**ಸಮಯ : 1 ಗಂಟೆ 30 ನಿಮಿಷಗಳು** **ವಿಷಯ : ಪ್ರಥಮ ಭಾಷೆ ಕನ್ನಡ** **ಅಂಕಗಳು : 40**

**I. ಖಾಲಿ ಬಿಟ್ಟ ಜಾಗವನ್ನು ಸೂಕ್ತ ಪದಗಳಿಂದ ತುಂಬಿರಿ : [3 x 1 = 3]**

1. ಬಾಲಕ ಮೈಲಾರ ಮಹಾದೇವನಿಗೆ ________________ ಕುರಿತು ಪ್ರಚಾರ ಮಾಡಬೇಕೆಂಬ ಆಸೆ ಹೆಚ್ಚಾಯಿತು.
2. ಡಾ. ಎಚ್. ಎಸ್. ವೆಂಕಟೇಶಮೂರ್ತಿರವರು ________________ ಜಿಲ್ಲೆಯಲ್ಲಿ ಜನಿಸಿದರು.
3. ________________ ಎಂದರೆ ದನಕರುಗಳನ್ನು ಬೆಂಕಿಯಲ್ಲಿ ಜಿಗಿಸುವುದು.

**II. ‘ಅ’ ಪಟ್ಟಿಯಲ್ಲಿನ ಪದಗಳಿಗೆ ‘ಬ’ ಪಟ್ಟಿಯಲ್ಲಿನ ಸರಿ ಹೊಂದುವ ಪದಗಳನ್ನು ಹೊಂದಿಸಿ ಬರೆಯಿರಿ : [4 x 1 = 4]**

| | ‘ಅ’ ಪಟ್ಟಿ | | ‘ಬ’ ಪಟ್ಟಿ’ |
|---|---|---|---|
| 4. | ಕೋಶಾವಸ್ಥೆಯಲ್ಲಿರುವ ಲಾರ್ವಾ | a) | ಅಂದಗೆಡದಂತೆ |
| 5. | ಅಚ್ಚಳಿಯದೆ | b) | ಕುಮಾರವ್ಯಾಸ |
| 6. | ಅಭಿಮನ್ಯು ಪರಾಕ್ರಮ | c) | ಭೂತಕಾಲ ಕ್ರಿಯಾಪದ |
| 7. | ಓಡಿದನು | d) | ಚಗಳಿ ಇರುವೆ |

| ಪ್ರಶ್ನೆ ಸಂಖ್ಯೆ | ಉತ್ತರಗಳು |
|---|---|
| 4. | |
| 5. | |
| 6. | |
| 7. | |

**III. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. [5 x 1 = 5]**

8. ‘ವಿಶೇಷಣ’ಗಳೆಂದರೆ ಏನು ?
9. ‘ದ್ವಂದ್ವ ಸಮಾಸ’ಕ್ಕೆ ಎರಡು ಉದಾಹರಣೆಗಳನ್ನು ಬರೆಯಿರಿ.
10. ‘ಬೇರೂರು’ ಈ ನುಡಿಗಟ್ಟನ್ನು ಬಳಸಿ ಸ್ವಂತವಾಕ್ಯ ಬರೆಯಿರಿ.
11. ‘ಸಂಕ್ರಾಂತಿ’ ಪದದ ಅರ್ಥವನ್ನು ಬರೆಯಿರಿ.
12. ‘ಬಾಲೆಯ ಹಣ್ಣನ್ನು ಬಾಳೆಯು ತಿಂದಳು’ ಈ ವಾಕ್ಯದಲ್ಲಿರುವ ತಪ್ಪನ್ನು ಸರಿಪಡಿಸಿ ಬರೆಯಿರಿ.

**IV. ಈ ವಾಕ್ಯಗಳನ್ನು ಯಾರು, ಯಾರಿಗೆ, ಯಾವಾಗ, ಹೇಳಿದರು ಎಂಬುದನ್ನು ಬರೆಯಿರಿ.** **[2 x 2 = 4]**

13. "ಮಂಡೇಲಿ ಕೊಂಚ ಮಾಂಸ ಇರಬೇಕು".

14. "ಬಾಲನಿವನೆನ್ನದಿರು ದುಗುಡವ ತಾಳಲಾಗದು ಬೊಪ್ಪ".

**V. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **[1 x 2 = 2]**

15. ತಿರುಕನೊರ್ವನೂರ ________________

________________ ಶಾಲೆಯಲ್ಲಿ

ಒರಗಿರುತ್ತಲೊಂದು ________________

________________ ಸತ್ತನವಗೆ

________________

ಕರಿಯ ________________ ಪುರದೊಳು.

**VI. ಈ ಕೆಳಗಿನ ಪದ್ಯಕ್ಕೆ ಮಾತ್ರೆಗಳನ್ನು (ಪ್ರಸ್ತಾರ) ಹಾಕಿ.** **[1 x 2 = 2]**

16. ಶಿಶಿವು ನೀನೆಲೆ ಮಗನೆ ಕಾದುವ
ರಸಮಬಲರು ಕಣಾ ಮಹಾರಥ
ರೆಸುಗೆಯನುನೀನೆಂತು ಸೈರಿಸಲಾಪೆ ಹೇಳೆಂದ

**VII. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿ** **[6 x 2 = 12]**

17. ಮಹಾದೇವ ಕಲಾದಗಿ ಎಂಬ ಗ್ರಾಮಕ್ಕೆ ಹೋಗಿ ಏನು ತಿಳಿದುಕೊಂಡರು?

18. ಕೆಲಸಗಾರ ಇರುವೆಗಳ ಕೆಲಸವೇನು?

19. ಕ್ರೀಡಾಗಾರದಲ್ಲಿ ಆಗಿದ್ದ ಗುಪ್ತ ಏರ್ಪಾಡುಗಳು ಏನು?

20. ಇಂದಿನ ಕಾಲದಲ್ಲಿ ಸಂಕ್ರಾಂತಿ ಹಬ್ಬದ ಆಚರಣೆ ಹೇಗಿರುತ್ತದೆ?

21. ಚಗಳಿ ಇರುವೆಗಳು ತಮ್ಮ ಗೂಡನ್ನು ಹೇಗೆ ನಿರ್ಮಿಸುತ್ತವೆ?

22. ಕಡಲುಗಳ ರಾಣಿಗೆ ಇನ್ನು ಉಳಿಗಾಲವಿಲ್ಲವೇಕೆ?

**V. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ** **[2 x 4 = 8]**

23. ಬ್ರಿಟಿಷರು ಭಾರತ ಬಿಟ್ಟು ತೊಲಗಬೇಕಾದರೆ ದಕ್ಷಿಣ ಭಾಗದ ಈ ಸ್ವಾತಂತ್ರ ಚಳುವಳಿಯ ನೇತೃತ್ವವನ್ನು ಮೈಲಾರ ಮಹಾದೇವರವರು ಹೇಗೆ ವಹಿಸಿದ್ದರು? ವಿವರಿಸಿ.

24. ತಿರುಕನು ಕನಸಿನಲ್ಲಿ ರಾಜ್ಯವನ್ನು ಆಳಿದ ರೀತಿಯನ್ನು ಕವಿ ಮುಪ್ಪಿನ ಷಡಕ್ಷರಿರವರು 'ತಿರುಕನ ಕನಸು' ಪದ್ಯದಲ್ಲಿ ಹೇಗೆ ವರ್ಣಿಸಿದ್ದಾರೆ?